## ದಿನಾಂಕ: 14.06.2016ರಂದು ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

**ಸಭೆಯಲ್ಲಿ ಹಾಜರಿದ್ದವರು :**

1. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರು
2. ಶ್ರೀ ಶಂಕರ್ ಆರ್. ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು
3. ಶ್ರೀ ಎನ್.ಪಿ. ರಮೇಶ್, ರಾಜ್ಯ ಮಾಹಿತಿ ಆಯುಕ್ತರು
4. ಶ್ರೀ ಕೆ.ಎಂ. ಚಂದ್ರೇಗೌಡ, ರಾಜ್ಯ ಮಾಹಿತಿ ಆಯುಕ್ತರು
5. ಶ್ರೀ ಪಿ.ಜಿ. ವಿಜಯಕುಮಾರ್, ರಾಜ್ಯ ಮಾಹಿತಿ ಆಯುಕ್ತರು
6. ಡಾ। ಸುಚೇತನ ಸ್ವರೂಪ, ರಾಜ್ಯ ಮಾಹಿತಿ ಆಯುಕ್ತರು
7. ಶ್ರೀ ಜಿ.ಸಿ. ವೃಷಭೇಂದ್ರಮೂರ್ತಿ, ಕಾರ್ಯದರ್ಶಿ

ಸಭೆಯಲ್ಲಿ ಈ ಕೆಳಕಂಡ ವಿಷಯವನ್ನು ಚರ್ಚಿಸಲಾಯಿತು.

**ಕರ್ನಾಟಕ ಮಾಹಿತಿ ಆಯೋಗಕ್ಕೆ ಹೆಚ್ಚುವರಿ ಶೀಘ್ರಲಿಪಿಗಾರರ ಹುದ್ದೆಗಳನ್ನು ಸೃಜಿಸುವ ಬಗ್ಗೆ:**

ಪ್ರಸ್ತುತ, ಆಯೋಗದಲ್ಲಿ 30,000ಕ್ಕಿಂತ ಹೆಚ್ಚಿಗೆ ಪ್ರಕರಣಗಳು ವಿಚಾರಣೆಗೆ ಬಾಕಿಯಿದ್ದು, ಕೆಲಸಕಾರ್ಯದ ಒತ್ತಡ ಹೆಚ್ಚಾಗಿರುವುದರಿಂದ ಪ್ರಕರಣಗಳ ವಿಲೇವಾರಿ ಪ್ರಮಾಣ ಕಡಿಮೆಯಾಗುತ್ತಿದೆ. ಹೊರಗುತ್ತಿಗೆ ಆಧಾರದ ಮೇರೆಗೆ ತುಂಬಲಾದ ಸಿಬ್ಬಂದಿಗಳಿಗೆ ಕೆಲಸಕಾರ್ಯಗಳ ಅನುಭವದ ಕೊರತೆಯಿರುವುದರಿಂದ, ನ್ಯಾಯಾಲಯದ ದಿನನಿತ್ಯದ ಕೆಲಸಕಾರ್ಯಗಳನ್ನು ಶೀಘ್ರವಾಗಿ ಹಾಗೂ ಸುಗಮವಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಆಯೋಗದ ಪ್ರತಿ ನ್ಯಾಯಾಲಯಕ್ಕೆ ಹೆಚ್ಚುವರಿಯಾಗಿ ಒಂದೊಂದು ಶೀಘ್ರಲಿಪಿಗಾರರಂತೆ ಒಟ್ಟು ಏಳು ಶೀಘ್ರಲಿಪಿಗಾರರ ಹುದ್ದೆಗಳನ್ನು ಸೃಜಿಸಲು ಹಾಗೂ ಈ ಹುದ್ದೆಗಳನ್ನು ಸರ್ಕಾರದ ವಿವಿಧ ಇಲಾಖೆಗಳಿಂದ ನುರಿತ ಶೀಘ್ರಲಿಪಿಗಾರರನ್ನು (ಕನ್ನಡ ಮತ್ತು ಆಂಗ್ಲ ಭಾಷೆಗಳ ಶೀಘ್ರಲಿಪಿಗಾರರಿಗೆ ಆದ್ಯತೆ) ನಿಯೋಜನೆ ಮೇರೆಗೆ ಭರ್ತಿ ಮಾಡಲು ಮತ್ತು ಈ ಹುದ್ದೆಗಳಿಗೆ ತಗಲುವ ಖರ್ಚುವೆಚ್ಚಗಳ ಬಗ್ಗೆ ಸೂಕ್ತ ಅನುದಾನವನ್ನು ಆಯೋಗಕ್ಕೆ ಒದಗಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲು ಆಯೋಗದ ಸಭೆಯಲ್ಲಿ ತೀರ್ಮಾನಿಸಲಾಯಿತು.

ಕ್ರಮ: ಕಾರ್ಯದರ್ಶಿ

(signature) 15/6/16

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.